**ಓ.ಎಸ್. ನಂಃ 350/2014**

**ಪಿ.ಡಬ್ಲ್ಯೂಃ 1**

**ದಿನಾಂಕ 28.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಕೆ.ಎನ್.ಎಸ್ ವಕೀಲರಿಂದಃ**

1.ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಸಿ.ಕೆ.ಬೋರೇಗೌಡ ಅಂತ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯ ತಂದೆ ಅಂದರೆ 1 ನೇ ಪ್ರತಿವಾದಿಯ ತಾತನ ಹೆಸರು ಸಿ.ಕೆ.ಕರೀಗೌಡ ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಂದೆಯವರು 1 ನೇ ಪ್ರತಿವಾದಿಯ ತಾತನಾದ ಸಿ.ಕೆ.ಕರೀಗೌಡರಿಂದ ಖರೀದಿ ಮಾಡಿರುತ್ತಾರೆ. ಸದರಿ ಸಿ.ಕೆ.ಕರೀಗೌಡರ ತಂದೆ ಹೆಸರು ಸಿದ್ದೇಗೌಡ ಅಂತ ಇದ್ದು, ಸದರಿ ಸಿ.ಕೆ.ಕರೀಗೌಡರಿಂದ ನನ್ನ ತಂದೆಯು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ. ನನಗೆ ಈಗ 75 ವರ್ಷ ವಯಸ್ಸಾಗಿರುತ್ತದೆ. ದಾವಾ ಆಸ್ತಿಯನ್ನು ನನ್ನ ತಂದೆಯವರು ಖರೀದಿಸುವ ಕಾಲಕ್ಕೆ ನನ್ನ ಜನನವಾಗಿತ್ತು.

2. ನಿಪಿ.1 ರ ಕ್ರಯಪತ್ರದಡಿಯಲ್ಲಿ ಮಾರಾಟವಾದ ಜಮೀನುಗಳ ಸರ್ವೆ ನಂಬರ್ 132 ಮತ್ತು 197 ಎಂದು ನಮುದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ 79/3 ರ ಆಸ್ತಿಯನ್ನು ನಿಪಿ.1 ರಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ನಿಪಿ.1 ರ ಕ್ರಯಪತ್ರದಲ್ಲಾಗಲೀ ಅಥವಾ ವಾದಪತ್ರದಲ್ಲಿ ಹೇಳಿರುವಂತಹ ತಿದ್ದುಪಡಿ ಕ್ರಯಪತ್ರದಲ್ಲಾಗಲೀ ನನ್ನ ತಂದೆ ನಿಪಿ.1 ರಡಿಯಲ್ಲಿ ಖರೀದಿ ಮಾಡಿದ ಆಸ್ತಿಯ ಸರ್ವೆ ನಂಬರ್ 79/3 ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ.

3. ಪ್ರತಿವಾದಿಯರು ನನ್ನೊಂದಿಗೆ ಗಲಾಟೆ ಮಾಡಿದಾಗ ನನ್ನ ತಂದೆಯವರು ನಿಪಿ.1 ರ ಪ್ರಕಾರ ದಾವಾ ಆಸ್ತಿಯನ್ನು ಖರೀದಿ ಮಾಡಿರುವ ವಿಷಯ ನನಗೆ ಮೊದಲಬಾರಿಗೆ ತಿಳಿದುಬಂದಿರುತ್ತದೆ. ನಿಪಿ.1 ಕ್ರಯಪತ್ರದಡಿಯಲ್ಲಿ ಖರೀದಿ ಮಾಡಿದ ಜಮೀನಿನ ವಿಸ್ತೀರ್ಣ 1 ಎಕರೆ 15 ಗುಂಟೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.5 ರ

ದಾಖಲೆಯಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಕೇವಲ 1 ಎಕರೆ 13 ಗುಂಟೆ ಮಾತ್ರ ಇರುತ್ತದೆ ಎಂದರೆ ಸರಿ. ಆದ್ದರಿಂದ ನಿಪಿ.1 ರಲ್ಲಿ ನಮೂದಿಸಿರುವ ಆಸ್ತಿಯ ವಿಸ್ತೀರ್ಣ ಹಾಗೂ ನಿಪಿ.5 ರಲ್ಲಿ ನಮೂದಿಸಿರುವ ವಿಸ್ತೀರ್ಣ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿಯ ತಾತನಾದ ಸಿ.ಕೆ.ಕರೀಗೌಡರ ಕಾಲದಿಂದಲೂ ಇಲ್ಲಿಯವರೆಗೂ ಸುಮಾರು 100 ವರ್ಷಗಳಿಂದ 1 ನೇ ಪ್ರತಿವಾದಿ ಮತ್ತು ಅವರ ಪೂರ್ವಜರೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ಸ್ವತಃ ನುಡಿದಿರುತ್ತಾರೆ. 1985-86 ನೇ ಸಾಲಿನಿಂದಲೇ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇಲ್ಲಿಯವರೆಗೂ ಇರುತ್ತದೆ ಎಂದರೆ ಸಾಕ್ಷಿಯು ಅವರು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾವಾ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರಬಹುದು ಎಂದು ನುಡಿದಿರುತ್ತಾರೆ. ತಮ್ಮ ತಾತನ ಕಾಲದಿಂದಲೂ 1 ನೇ ಪ್ರತಿವಾದಿಯೇ ದಾವಾ ಆಸ್ತಿಯಲ್ಲಿ ಅಡಿಕೆ ಮತ್ತು ತೆಂಗು ಬೆಳೆದು ದಾವಾ ಆಸ್ತಿಯ ಸಂಬಂದ ಕಂದಾಯವನ್ನು ಸಹ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯ ಕಂದಾಯ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಬಗ್ಗೆ ನನಗೆ 2014 ರಲ್ಲಿ ಗೊತ್ತಾಗಿರುತ್ತದೆ. ನಾನು ದಿಃ 26.06.2014 ರಂದು ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ತಹಸೀಲ್ದಾರವರ ಕಚೇರಿಗೆ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸರ್ವೆ ನಂಬರ್ 79/3 ರ 1 ಎಕರೆ 13 ಗುಂಟೆ ಜಮೀನನ್ನು ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ಸದರಿ ಅರ್ಜಿಯಲ್ಲಿ ನಾನು ನಮೂದಿಸಿದ್ದೆ. ನಾನು ದಿಃ 26.06.2014 ರಂದು ಖಾತೆ ಬದಲಾವಣೆ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಾಗಲೀ ಅಥವಾ ನಿಪಿ.7 ರಲ್ಲಾಗಲೀ ಸರ್ವೆ ನಂಬರ್ 79/3 ರ 1 ಎಕರೆ 13 ಗುಂಟೆ ಜಮೀನಿನ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ನಿಪಿ.7 ರ ಹಿಂಬರಹದಲ್ಲಿ ಸರ್ವೆ ನಂಬರ್ 79/3 ರ 1 ಎಕರೆ 13 ಗುಂಟೆ ಜಮೀನಿನ ಬಗ್ಗೆ ನಮೂದು ಇಲ್ಲ ಬದಲಾಗಿ ಸರ್ವೆ ನಂಬರ್ 231/2 ರ 1 ಎಕರೆ 15 ಗುಂಟೆ ಜಮೀನಿನ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿಯು ನಾನು ಪಹಣಿಯ

ಪ್ರಕಾರ ವಿಸ್ತೀರ್ಣವನ್ನು ನಮೂದಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ.1 ರಲ್ಲಿ ಖರೀದಿಸಿದ ಆಸ್ತಿಯ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತು. ನಿಪಿ.1 ರಲ್ಲಿ ಖರೀದಿಸಿದ ಆಸ್ತಿಯ ಜಮೀನಿನ ಚೆಕ್ಕುಬಂದಿ ಮತ್ತು ದಾವಾ ಆಸ್ತಿಯ ಚೆಕ್ಕುಬಂದಿ ಇವೆರಡೂ ಬೇರೆ ಬೇರೆ ಚೆಕ್ಕುಬಂದಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಖರೀದಿಸಿದ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಚಾಮರಾಜನಗರ ನಾಲೆ, ಪಶ್ಚಿಮಕ್ಕೆ ಗಂಧನಹಳ್ಳಿಯ ರಾಮೇಗೌಡರ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಶಿಚಮ ದಿಕ್ಕಿಗೆ ಗಂಧನಹಳ್ಳಿಯ ರಾಮೇಗೌಡರ ಜಮೀನು ಇಲ್ಲ ಬದಲಾಗಿ ಶಶಿಕುಮಾರವರ ಜಮೀನು ಇದೆ ಎಂದರೆ ಸಾಕ್ಷಿಯು ಸದರಿ ಗಂಧನಹಳ್ಳಿ ರಾಮೇಗೌಡರ ಜಮೀನನ್ನೇ ಸದರಿ ಶಶಿಕುಮಾರವರು ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ.

7. ದಾವಾ ಆಸ್ತಿಯು 1ನೇ ಪ್ರತಿವಾದಿಗೆ ತನ್ನ ತಾತ ಮತ್ತು ತಂದೆಯಿಂದ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ನಾನೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ನುಡಿದಿರುತ್ತಾರೆ. ನಿಪಿ.1 ರಡಿಯಲ್ಲಿ ನನ್ನ ತಂದೆಯವರು ಖರೀದಿಸಿದ ಆಸ್ತಿಯ ಸರ್ವೆ ನಂಬರ್ ಬೇರೆಯಾಗಿದ್ದು ದಾವಾ ಆಸ್ತಿಯ ಸರ್ವೆ ನಂಬರ್ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1ರಡಿಯಲ್ಲಿ ನನ್ನ ತಂದೆಯವರು ಖರೀದಿಸಿದ ಆಸ್ತಿಗೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಡಿಯಲ್ಲಿ ಖರೀದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ದಾವಾ ಆಸ್ತಿಯ ವಿಸ್ತೀರ್ಣ ಬೇರೆ ಬೇರಯಾಗಿರುತ್ತದೆ ಎಂದರೆ ಸರಿಯಲ್ಲ. ತಮ್ಮ ತಾತನ ಕಾಲದಿಂದಲೂ ದಾವಾ ಆಸ್ತಿಯ ಕಂದಾಯ ದಾಖಲೆಗಳನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡು 1ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**